# ಪ್ರಾರ್ಥನೆ

## ಬುದ್ಧ



ಬುದ್ಧ, ಬುದ್ಧ —
ಜಗವೆಲ್ಲ ಮಲಗಿರಲು ಅವನೊಬ್ಬನೆದ್ದ
ಮಡದಿ ಮಗು ಮನೆ-ಮಾರು ರಾಜ್ಯ-ಗೀಜ್ಯ
ಹೊತ್ತಿರುವ ಉರಿಯಲ್ಲಿ ಆಯಿತಾಜ್ಯ
ಹಿಂದೆ ಬಿದ್ದವು ಎಲ್ಲೊ ಕುದುರೆ ಕಾಲಾಳು
ಬಿಚ್ಚಿ ಉದಿರಿತು ಎಲ್ಲೊ ಮನದ ಬಾಳು
ಹೊರಟ ಹೊರಟೇ ಹೊರಟ, ಹೊರಟನೆತ್ತೋ
ಸಾಹಸಿಯ ಗೊತ್ತುಗುರಿ ಅವಗು ಗೊತ್ತೋ!

ಕಾಮ-ಕ್ರೋಧವ ದಾಟಿ, ಮದ-ಮತ್ಸರವ ತುಳಿದು
ಮೋಹ-ಲೋಭವ ಮೆಟ್ಟಿ ಅಡಿ ಕಿತ್ತಿ ಇಟ್ಟ
ಇದೊ ತಗ್ಗು, ಅದೊ ಗುಡ್ಡ, ಅಗೊ ಮಲೆಯ ಬೆಟ್ಟ
ನೆಲ ತೆಳಗೆ ಬಿಟ್ಟ.

ಏರಿದೇರಿದನೇರೆ ಗಾಳಿಗುದುರೆ ಸವಾರಿ
ಚಂದ್ರಕಿರಣವ ಮೀರಿ ಸೂರ್ಯ ಸೇರಿ
ಬೆಳಕನ್ನೆ ಹಿಂದೊಗೆದು ತಮದ ಬಸಿರನೆ ಬಗೆದು
ಅಸ್ಪರ್ಶ ಅವಕಾಶದಲ್ಲಿ ಇದ್ದ.
ಬುದ್ಧ-ಬುದ್ಧ-ಬುದ್ಧ
ಶಬ್ದ-ನಾದ ಧ್ವನಿಯ ಸದ್ದ ಮೀರಿದ್ದ
ಇಲ್ಲ ಎಂಬುವ ಕೊನೆಗೆ ಆತ್ಮ ಶುದ್ಧ
ಇದ್ದರೇನಿಲದಿದ್ದರೇನೆನಲು ಗೆದ್ದ.
ಅಲ್ಲಿಂದ ಇಲ್ಲಿವರೆ ಹೊರಳಿ ನೋಡಿ
ಇದ್ದುದಿದ್ದಂತಿತ್ತು ಜನನ-ಮರಣದ ಜೋಡಿ
ಗೆದ್ದುದೇನೆಂದೆನುತ ಮರಳಿ ಜಿಗಿದ
ಭೂತಜಾತದ ಎದೆಯ ಸೀಳಿ ಸಿಗಿದ
ಅದೆ ತನ್ನ ಮನೆಯೆಂದು ಸಿದ್ಧ ಬಗೆದ.

ಬುದ್ಧನೆಂಬುವ ಒಬ್ಬ ಎಂದೊ ಇದ್ದ
ಎನುವಂತೆ ಇಂದಿಗೂ ಇಲ್ಲೆ ಇಲ್ಲ
ಬುದ್ಧ ಹುಟ್ಟಿದ ಮೇಲೆ ಹಳೆ ಜಗವು ಸತ್ತು
ಇದ್ದು ಇಲ್ಲದ ಹಾಗೆ, ಹಾಗೆ ಇತ್ತು.
ಬುದ್ಧ ಸತ್ತನು ಎಂದು ಯಾರೆಂದರೂ
ಬುದ್ಧನ ಜಯಂತಿಗಿದೆ ಜಯವೆಂದಿಗೂ
ಬುದ್ಧನ ಸಮಾಧಿಯದು ಮಾನವನ ಹೃದಯ
ಅದುವೆ ಕಾಯುತ್ತಲಿದೆ ಕಲ್ಕಿ ಉದಯ.

— 'ಅಂಬಿಕಾತನಯದತ್ತ'
(ಡಾ. ದ.ರಾ.ಬೇಂದ್ರೆ)

# ಸೂಕ್ತಿ

**ದು**ಃಖಗಳಲ್ಲಿ ಉದ್ವೇಗವಿಲ್ಲದ ಮನಸ್ಸನ್ನು ಹೊಂದಿ, ಸುಖಗಳಲ್ಲಿ ಆಸೆಯಿಲ್ಲದೆ, ಆಸಕ್ತಿ-ಭಯ-ಕ್ರೋಧಗಳಿಲ್ಲದವನು ಸ್ಥಿತಪ್ರಜ್ಞನು. — ಭಗವದ್ಗೀತೆ *(೨.೫೬)*

**ಪ್ರ**ತಿಯೊಂದು ಪ್ರಥಮ ಫಲವೂ ದೀನರಿಗೆ ಹೋಗಬೇಕು. ಉಳಿದುದಕ್ಕೆ ಮಾತ್ರ ನಮಗೆ ಹಕ್ಕಿರುವುದು. ದೀನರು ಭಗವಂತನ ಪ್ರತಿನಿಧಿಗಳು. ಸಂಕಷ್ಟಕ್ಕೀಡಾದವರು ಅವನ ಪ್ರತಿನಿಧಿಗಳು. — ಸ್ವಾಮಿ ವಿವೇಕಾನಂದ

**ಅ**ವಯವಗಳು ನೀರಿನಿಂದ ನಿರ್ಮಲವಾಗುತ್ತವೆ. ಸತ್ಯದಿಂದ ಮನಸ್ಸು ಶುದ್ಧವಾಗುತ್ತದೆ. ವಿದ್ಯೆ, ತಪಸ್ಸಿನಿಂದ ಜೀವಾತ್ಮನೂ, ಜ್ಞಾನದಿಂದ ಬುದ್ಧಿಯೂ ಸ್ವಚ್ಛವಾಗುತ್ತವೆ. — ಮನುಸ್ಮೃತಿ

**ದಿ**ಟ್ಟತನವಿದ್ದರೆ ಶೋಕಿಸದೆ ಆಪತ್ತಿಗೆ ಪ್ರತಿಯಾಗಿ ಮಾಡಬೇಕಾದದ್ದನ್ನು ಮಾಡಬೇಕು. ಚಿಂತಿಸದಿರುವುದೇ ದುಃಖಕ್ಕೆ ಔಷಧ. — ಮಹಾಭಾರತ *(ಸ್ತ್ರೀಪರ್ವ, ೨೦೨೨)*

**ರೋ**ಗಿಯನ್ನು ಸಾಂತ್ವನಗೊಳಿಸುವುದರಲ್ಲೇ ನಿಜವಾದ ಔಷಧಿ ಅಡಗಿದೆ. ಅಷ್ಟರಲ್ಲಿ ನಿಸರ್ಗ ತಾನಾಗಿಯೇ ಅವನ ಕಾಯಿಲೆಯನ್ನು ಗುಣಪಡಿಸುವುದು. — ವಾಲ್ಟೇರ್

**ರೋ**ಗವನ್ನು ಗುಣಪಡಿಸುವ ವೈದ್ಯನು ಉತ್ತಮ ಕುಶಲನಿರಬಹುದು; ಆದರೆ ರೋಗ ಬಾರದಂತೆ ತಡೆಯುವ ವೈದ್ಯನೇ ಅತ್ಯಂತ ಸುರಕ್ಷಿತ ವೈದ್ಯ. — ಥಾಮಸ್ ಫುಲರ್